ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/2059/2019/ಎಆರ್‌ಇ-12

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ : 02.09.2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ. ಎಸ್.ಎ.ಸಾವಗಾಂವ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (2) ಶ್ರೀ. ಎಂ.ಬಿ.ಇಮ್ಮಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, (3) ಶ್ರೀ.ಎನ್.ಪಿ.ನಾಯಕ್, ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಪ್ರಸ್ತುತ ಕುಮಾರ್ ಸ್ವಾಮಿ ಲೇಔಟ್, ಹನುಮಾನ ನಗರ, ಬೆಳಗಾಂ) ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಶ್ರೀ. ರಾಮಕೃಷ್ಣ ಭೀಮಪ್ಪ ಭಜಂತ್ರಿ, ಪತ್ರಕರ್ತರು, ಗೌಸಿದ್ದನ ಮಡ್ಡಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ. ಎಸ್.ಎ.ಸಾವಗಾಂವ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (2) ಶ್ರೀ. ಎಂ.ಬಿ.ಇಮ್ಮಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, (3) ಶ್ರೀ.ಎನ್.ಪಿ.ನಾಯಕ್, ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಪ್ರಸ್ತುತ ಕುಮಾರ್ ಸ್ವಾಮಿ ಲೇಔಟ್, ಹನುಮಾನ ನಗರ, ಬೆಳಗಾಂ) (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ದ, ಅವರ ದುರ್ನಡತೆಯ ಬಗ್ಗೆ ಆರೋಪಿಸಿ

ದೂರು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯಿದೆ, 1987ರ ಕಲಂ 9ರನ್ವಯ ತನಿಖೆಯನ್ನು ತೆಗೆದುಕೊಳ್ಳಲಾಗಿದೆ.

2. 1ರಿಂದ 3ನೇ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 2(12)ರೀತ್ಯಾ ಸರ್ಕಾರಿ ನೌಕರರಾಗಿರುತ್ತಾರೆ.

3. ದೂರಿನ ಸಾರಾಂಶ: ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ಶಿರಹಟ್ಟಿ ಗ್ರಾಮದಲ್ಲಿ ಸ್ಮಶಾನಕ್ಕೆ ತಂತಿ ಬೇಲಿ ಚಿತಾಗಾರ ಮತ್ತು ಕೊಳವೆ ಬಾವಿ ತೋಡಿ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಪಂಚಾಯತ್ ರಾಜ್ ಇಲಾಖೆಯಿಂದ ಕೈಗೊಂಡಿದ್ದು ಅದನ್ನು ಎದುರುದಾರರ ಮೇಲುಸ್ತುವಾರಿಯಲ್ಲಿ ಮಾಡಿರುತ್ತಾರೆ. ಕಾಮಗಾರಿಯು ಕಳಪೆ ಮತ್ತು ಅಪೂರ್ಣವಾಗಿದ್ದು ಅದಕ್ಕೆ ಕಾಯ್ದಿರಿಸಿದ ಸಂಪೂರ್ಣ ಬಿಲ್ಲು ಸಂದಾಯವಾಗಿರುತ್ತದೆ. ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿ ಭ್ರಷ್ಟಾಚಾರದಲ್ಲಿ ಶಾಮೀಲಾಗಿರುವ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮಗೊಳ್ಳಬೇಕೆಂದು ದೂರು ಸಲ್ಲಿಸಿರುತ್ತಾರೆ.

4. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಶಿರಹಟ್ಟಿ ಪುನರ್ವಸತಿ ಕೇಂದ್ರದ ಸ್ಮಶಾನ ಜಾಗಕ್ಕೆ ತಂತಿ ಬೇಲಿ, ಚಿತಾಗಾರ ಹಾಗೂ ಕೊಳವೆ ಬಾವಿ ನಿರ್ಮಾಣ ಮಾಡುವ ಕಾಮಗಾರಿಯು 2016–17ನೇ ಸಾಲಿನ ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ಪುನರ್ ನಿರ್ಮಾಣ ಇಲಾಖೆಯ ಅನುದಾನದಲ್ಲಿ ಅಂದಾಜು ರೂ.30 ಲಕ್ಷಗಳಿಗೆ ಹಣ ಮಂಜೂರಾಗಿರುತ್ತದೆ. ಗುತ್ತಿಗೆದಾರರಿಗೆ ಟೆಂಡರ್ ಮೂಲಕ ಕಾಮಗಾರಿಯನ್ನು ವಹಿಸಿಕೊಡಲಾಗಿರುತ್ತದೆ. ಟೆಂಡರ್ ಷರತ್ತುಗಳಂತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸ್ಮಶಾನ ಜಾಗದ ಹೊರಗೆ ನೀರು ಲಭ್ಯವಿರುವುದು ಕಂಡು ಬಂದಿದ್ದರಿಂದ ಕೊಳವೆ ಬಾವಿಯನ್ನು ಕೊರೆಯುವುದು ಸೂಕ್ತವಲ್ಲವೆಂದು ಸದರಿ ಕೊಳವೆ ಬಾವಿಯನ್ನು ಸೂಕ್ತ ಹಾಗೂ ಸರ್ಕಾರಿ ಸ್ಥಳಗಳಲ್ಲಿ ಗುರುತುಪಡಿಸಿದ ನಂತರ ಕೊರೆಯಲಾಗುವುದು ಮತ್ತು ಗುತ್ತಿಗೆದಾರರಿಗೆ ಯಾವುದೇ ಬಿಲ್ಲು ಸಂದಾಯ ಮಾಡಿರುವುದಿಲ್ಲ. ಕೊಳವೆ ಬಾವಿ ಕೊರೆಯುವುದು ಬಾಕಿ ಇರುವುದರಿಂದ ಆ ಕೆಲಸ ಕೈಗೊಂಡಿರುವುದಿಲ್ಲ. ಸ್ಮಶಾನ ರಸ್ತೆ ಕೆಲಸವನ್ನು ಗುತ್ತಿಗೆದಾರರು

ಅಂದಾಜು ಪತ್ರಿಕೆಯಂತೆ ನಿರ್ವಹಿಸಿದ್ದು ಗುತ್ತಿಗೆದಾರರಿಗೆ ಸದರಿ ರಸ್ತೆಯ ಬಿಲ್ಲನ್ನು ಸಂದಾಯ ಮಾಡಿರುತ್ತಾರೆ. ಸ್ಮಶಾನ ಜಾಗದ ಪೂರ್ವ ಬದಿಗೆ ಸರ್ಕಾರಿ ಮತ್ತು ಖಾಸಗಿ ಜಮೀನುಗಳ ಮಧ್ಯದ ಸೀಮೆ ಗುರುತಿಸಬೇಕಾಗಿದ್ದು, ಸೀಮೆ ಗುರುತಿಸುವ ಕಾರ್ಯ ಪೂರ್ಣಗೊಂಡ ನಂತರ ತಂತಿಬೇಲಿ ಹಾಕುವ ಕೆಲಸವನ್ನು ಪೂರ್ಣಗೊಳಿಸಲಾಗುವುದು. ಚಿತಾಗಾರ ಕಾಮಗಾರಿಯು ಪ್ರಗತಿಯಲ್ಲಿದ್ದು, ಈ ಕೆಲಸಗಳು ಸಮರ್ಪಕವಾಗಿ ಪೂರ್ಣಗೊಂಡ ನಂತರವೇ ಗುತ್ತಿಗೆದಾರರಿಗೆ ಪೂರ್ಣ ಹಣ ಸಂದಾಯ ಮಾಡಲು ಕ್ರಮ ಜರುಗಿಸಲಾಗುವುದು ಎಂದು ಹೇಳಿರುತ್ತಾರೆ. ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು ಇನ್ನು ಪೂರ್ಣಗೊಂಡಿರುವುದಿಲ್ಲವೆಂದು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಬೇಕಾಗಿರುತ್ತದೆ ಎಂದು ಹೇಳಿರುತ್ತಾರೆ.

5. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಈಗಾಗಲೇ ನಿವೃತ್ತಿಯಾಗಿದ್ದು, ತಾನು ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ನಿರ್ವಹಿಸಿದ್ದು, ಗ್ರಾಮ ಪಂಚಾಯತಿ, ಶಿರಹಟ್ಟಿಯಲ್ಲಿ ಪುರ್ನವಸತಿ ಕೇಂದ್ರದ ಸ್ಮಶಾನ ಜಾಗಕ್ಕೆ ತಂತಿ ಬೇಲಿ ಚಿತಾಗಾರ ಹಾಗೂ ಕೊಳವೆ ಬಾವಿ ನಿರ್ಮಾಣ ಸಂಬಂಧ ಸರ್ಕಾರದಿಂದ ಮಂಜೂರಾತಿ ಪಡೆದಿದ್ದು ಅದರಲ್ಲಿ ರೂ.29,45,693/–ಗಳ ಕ್ರಿಯಾ ಯೋಜನೆ ಮಂಜೂರಾತಿ ನೀಡಿದ್ದು, ದಿ:1.7.2017ರಂದು ಟೆಂಡರ್‌ನಲ್ಲಿ ಭಾಗವಹಿಸಿದ್ದ ಶ್ರೀ. ಆರ್.ಎಸ್. ಸನ್ನದಿ ಇವರಿಗೆ ಗುತ್ತಿಗೆ ಕಾಮಗಾರಿಯನ್ನು 4 ತಿಂಗಳ ಅವಧಿಗೆ ಮುಕ್ತಾಯಗೊಳಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆ ನೀಡಲಾಗಿದೆ. ಷರತ್ತಿಗೆ ಅನುಗುಣವಾಗಿ 3ನೇ ಗುಣಮಟ್ಟದ ತಪಾಸಣೆ ವ್ಯಕ್ತಿಯ ಶಿಫಾರಸ್ಸಿನನ್ವಯ ಹಾಗೂ ವಿಭಾಗ ಮಟ್ಟದ ತಾಂತ್ರಿಕ ಸಿಬ್ಬಂದಿ ಮತ್ತು ಲೆಕ್ಕ ಪರಿಶೋಧಕರು, ಚಿಕ್ಕೋಡಿ ಇವರು ಪರಿಶೀಲಿಸಿದ ನಂತರ ಗುಣಮಟ್ಟದ ಬಗ್ಗೆ ಖಾತರಿ ಪಡಿಸಿ ರಸ್ತೆಯ ಐಟಂನ ಭಾಗಶಃ ಬಿಲ್ಲನ್ನು ಗುತ್ತಿಗೆದಾರರಿಗೆ ಸಂದಾಯ ಮಾಡಲಾಗಿದೆ. ಅಂದಾಜು ಪತ್ರಿಕೆಯ ಉಳಿದ ಐಟಂಗಳಾದ ಬೋರ್‌ವೆಲ್, ಸ್ಮಶಾನದ ಚಿತಾಗಾರ, ತಂತಿಬೇಲಿ ಕಾಮಗಾರಿ ಪೂರ್ಣಗೊಂಡಿದ್ದು, ಮೇಲಿನ ಅಲಭ್ಯತೆಯ ಬಗ್ಗೆ ಭೂವಿಜ್ಞಾನಿಗಳು ದೃಢಪಡಿಸಿದ್ದು, ಸ್ಮಶಾನ ಮತ್ತು ಚಿತಾಗಾರ ತಂತಿಬೇಲಿ ಕಾಮಗಾರಿಯನ್ನು ರೈತರು ತಮ್ಮ ಜಮೀನಿಗೋಸ್ಕರ ತಕರಾರು ಸಲ್ಲಿಸಿದ್ದರಿಂದ ಕಾಮಗಾರಿ

ಅಪೂರ್ಣಗೊಂಡಿದೆ. ದಿನಾಂಕ:29.6.2018ರಂದು ಅವರಿಗೆ ವರ್ಗಾವಣೆಯಾಗಿರುತ್ತದೆ. ತಮ್ಮಿಂದ ಯಾವುದೇ ಸರ್ಕಾರಕ್ಕೆ ನಷ್ಟ ಉಂಟಾಗಿರುವುದಿಲ್ಲವೆಂದು ಹೇಳಿರುತ್ತಾರೆ.

6. ವಿಚಾರಣಾ ಸಂದರ್ಭದಲ್ಲಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ಇವರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಒಳಪಡಿಸಲಾಗಿದ್ದು, ತನಿಖಾ ವರದಿಯನ್ನು ಪಡೆದುಕೊಳ್ಳಲಾಗಿದೆ. ತಮ್ಮ ತನಿಖಾ ವರದಿಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಕ್ಕೋಡಿಯವರು ದಿ:22.5.2017ರಂದು ಅಲ್ಪಾವಧಿ (ಇ-ಪ್ರೋಕ್ಯೂರಮೆಂಟ್) ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಶ್ರೀ. ಆರ್.ಎನ್.ಸನ್ನದಿ, ಗುತ್ತಿಗೆದಾರರು, ಶಿರಹಟ್ಟಿ ಇವರು ಟೆಂಡರ್ ಸಲ್ಲಿಸಿದಂತೆ ಸದರಿಯವರಿಗೆ ರೂ.29,45,693/- ಗಳ ವೆಚ್ಚದಲ್ಲಿ ದಿ:1.7.2017ರಂದು ಕಾರ್ಯದೇಶವನ್ನು ನೀಡಿರುತ್ತಾರೆ.

7. ತನಿಖಾಧಿಕಾರಿಯವರ ವರದಿಯ ಪ್ರಕಾರ ಸ್ಮಶಾನ ಜಾಗದಲ್ಲಿ ಬೆಳದಿರುವ ಗಿಡಗಂಟಿ 650 ಮಿ. ಉದ್ದ ಹಾಗೂ 3.75 ಮೀ. ಅಗಲದ ಖಡಿಕರಣದ ರಸ್ತೆ ನಿರ್ಮಿಸಿದ್ದು, ಸ್ವಶಾನದ ಒಳಗೆ 200 ಮೀ. ಉದ್ದ ಹಾಗೂ 7.50 ಅಗಲದ ಮುರಮ ರಸ್ತೆ ನಿರ್ಮಿಸಿರುತ್ತಾರೆ. ಸ್ಮಶಾನದ ಸುತ್ತಲೂ ತಂತಿಬೇಲಿ ಅಳವಡಿಸಲು ಸಿಮೆಂಟ್ ಕಂಬಗಳನ್ನು ನಿಲ್ಲಿಸಿದ್ದು ಆದರೆ ಇನ್ನು ತಂತಿ ಬೇಲಿ ಅಳವಡಿಸಿರುವುದಿಲ್ಲ. ಆದರೆ ಇನ್ನುಳಿದ ಐಟಂಗಳಾದ ಬೋರ್‌ವೆಲ್ ಕೊರೆಯಿಸುವುದು, ಹ್ಯಾಂಡ ಪಂಪ್ ಅಳವಡಿಸುವುದು, ಪ್ಲಾಟಫಾರ್ಮ ಶೆಡ್ ನಿರ್ಮಾಣ ಮಾಡುವುದು ಬಾಕಿ ಇರುತ್ತದೆ. ಕಾಮಗಾರಿಯನ್ನು ದಿ:1.7.2017ರಂದು ಗುತ್ತಿಗೆದಾರರಿಗೆ 4 ತಿಂಗಳ ಕಾಲಾವಧಿಯನ್ನು ನೀಡಿ ಸ್ಥಳವನ್ನು ಹಸ್ತಾಂತರಿಸಿರುತ್ತಾರೆ. ದಿ:12.7.2017ರಂದು ಕಾಮಗಾರಿ ಕೆಲಸ ಮುಕ್ತಾಯಬೇಕಾಗಿದ್ದು ಆದರೆ ಕಾಲ ಮಿತಿಯೊಳಗೆ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. 1 ಮತ್ತು 2ನೇ ಎದುರುದಾರರು ಕಾಮಗಾರಿಗಳ ಮೇಲುಸ್ತುವಾರಿ ಅಧಿಕಾರಿಯಾಗಿದ್ದು ಕಾಮಗಾರಿಯನ್ನು ಮುಕ್ತಾಯಗೊಳಿಸದೇ ಇದ್ದು, ಗುತ್ತಿಗೆದಾರರು ಷರತ್ತುಗಳನ್ನು ಉಲ್ಲಂಘಿಸಿದ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದು ಕಂಡುಬಂದಿರುವುದಿಲ್ಲ.

8. ಈ ಎಲ್ಲಾ ಮೇಲ್ಕಾಣಿಸಿದ ಅಂಶಗಳನ್ನು ಪರಿಶೀಲಿಸಲಾಗಿ, ದಿ:12.7.2017ರಿಂದ 12.11.2017ರ ಅವಧಿಯಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಬೇಕಾಗಿದ್ದು, ಆದರೆ ಇಲ್ಲಿಯವರೆವಿಗೂ ಕಾಮಗಾರಿ ಮುಕ್ತಾಯಗೊಂಡಿರುವುದಿಲ್ಲ. 1 ಮತ್ತು 2ನೇ ಎದುರುದಾರರು ಗುತ್ತಿಗೆದಾರರಿಗೆ ಕಾಮಗಾರಿ ಮುಗಿಸದೇ ಇರುವ ಬಗ್ಗೆ ಯಾವುದೇ ಸೂಚನಾ ಪತ್ರನ್ನು ನೀಡಿರುವುದಿಲ್ಲ. ಗುತ್ತಿಗೆದಾರರರು ಗುತ್ತಿಗೆ ಕರಾರನ್ನು ಉಲ್ಲಂಘಿಸಿದರೂ ಅವರ ಮೇಲೆ ಕ್ರಮ ಕೈಗೊಂಡಿರುವುದಿಲ್ಲ ಎಂಬ ಅಂಶ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. 3ನೇ ಎದುರುದಾರರು ನಿವೃತ್ತರಾಗಿದ್ದು, ಅವರು ಕಾರ್ಯನಿರ್ವಾಹಕ ಅಭಿಯಂತರರಾಗಿರುತ್ತಾರೆ. ಎಲ್ಲಾ ಕಾಮಗಾರಿಯ ಹೊಣೆಯನ್ನು 1 ಮತ್ತು 2ನೇ ಎದುರುದಾರರ ಮೇಲೆ ಇದೆ ಅಂತಲೂ ಕಂಡುಬರುತ್ತದೆ. ಈ ಎಲ್ಲಾ ಕಾಮಗಾರಿ ಮೇಲುಸ್ತುವಾರಿ 1 ಮತ್ತು 2ನೇ ಎದುರುದಾರ ಮೇಲೆ ಇದ್ದ ಕಾರಣ ಅವರು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ.

10. ದಿನಾಂಕ:12.11.2017ರೊಳಗಾಗಿ ಕಾಮಗಾರಿ ಪೂರ್ಣಗೊಳ್ಳಬೇಕಾಗಿದ್ದರೂ ಸಹ ಇಲ್ಲಿಯವರೆವಿಗೂ ಕಾವಗಾರಿ ಪೂರ್ಣಗೊಂಡಿರುವುದಿಲ್ಲ. ತನಿಖಾಧಿಕಾರಿಯ ವರದಿ ಪ್ರಕಾರ ಆಗಸ್ಟ್ 2019ರಲ್ಲಿ ನೀರಿನ ಪ್ರವಾಹ ಬಂದು ಶಿರಹಟ್ಟಿ ಗ್ರಾಮದ ಪುನರ್ವಸತಿ ಕೇಂದ್ರ ಸಂಪೂರ್ಣ ಮುಳುಗಡೆಯಾಗಿದೆ ಎಂದು ಕಾಣಿಸಿದ್ದಾರೆ. ಅಂದರೆ ಈ ಕಾಮಗಾರಿ ಪೂರ್ಣಗೊಳ್ಳಬೇಕಾದ ಅವಧಿ ಅಂದರೆ ದಿ:12.11.2017ರ ನಂತರ ಸುಮಾರು ಒಂದುವರೆ ವರ್ಷದ ನಂತರ ನೀರಿನ ಪ್ರವಾಹವೆಂದು ಕಾಣಿಸಿದ್ದಾರೆ. ಅದಲ್ಲದೆ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ ವಿಭಾಗ ಇವರು ಭೂಮಾಪನ ಅಧಿಕಾರಿ, ಅಥಣಿ ಬರೆದಿರುವ ಪತ್ರ ದಿ:11.10.2019ರಂದಾಗಿದೆ. ಅಂದರೆ ದಾಖಲೆಗಳ ಪ್ರಕಾರ ಕಾಮಗಾರಿ ಪೂರ್ಣಗೊಳ್ಳಬೇಕಾಗಿದ್ದ ಅವಧಿ ಒಂದುವರೆ ವರ್ಷ ದಾಖಲೆಗಳಿಲ್ಲದೆ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂಬುದು ಕಂಡುಬರುತ್ತದೆ.

11. ಕಾರಣ ಈ ಎಲ್ಲಾ ಅಂಶಗಳನ್ನು ನೋಡಲಾಗಿ ದಿ:1.7.2017ರಂದು ಕಾಮಗಾರಿಯನ್ನು ಗುತ್ತಿಗೆದಾರರಿಗೆ 4 ತಿಂಗಳ ಕಾಲಾವಧಿಯನ್ನು ನೀಡಿ ಮುಗಿಸಿಕೊಡಲು ದಿ:12.7.2017ರಂದು ಹಸ್ತಾಂತರಿಸಲಾಗಿದೆ. ಅದರೆ ಕಾಮಗಾರಿ ಪೂರ್ಣಗೊಂಡಿರುವುದಿಲ್ಲವೆಂಬುದು ಎದುರುದಾರರ ಆಕ್ಷೇಪಣೆಯಲ್ಲಿ ಹಾಗೂ ತನಿಖಾ ವರದಿಯಿಂದ ಕಂಡುಬರುತ್ತದೆ. 1 ಮತ್ತು 2ನೇ ಎದುರುದಾರರು ಕಾಮಗಾರಿಗಳ ಮೇಲುಸ್ತುವಾರಿ ಅಧಿಕಾರಿಗಳಾಗಿದ್ದು, ಕಾಮಗಾರಿ ಮುಕ್ತಾಯಗೊಳಿಸದೇ ಇರವುದರಿಂದ ಗುತ್ತಿಗೆದಾರರು ಷರತ್ತುಗಳನ್ನು ಉಲ್ಲಂಘಿಸಿದ ಸಂಬಂಧ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದು ಕಂಡು ಬಂದಿರುವುದಿಲ್ಲ.

12. 3ನೇ ಎದುರುದಾರರು 1 ಮತ್ತು 2ನೇ ಎದುರುದಾರರಿಗೆ ಕಾಮಗಾರಿಯ ಮುತುವರ್ಜಿ ವಹಿಸುವ ಜವಾಬ್ದಾರಿಯನ್ನು ನೀಡಿದ್ದು ದಿ:1.7.2017ರ ಆದೇಶದಲ್ಲಿ ನಮೂದಿಸಲಾಗಿರುತ್ತದೆ. ಕಾರಣ 1 ಮತ್ತು 2ನೇ ಎದುರುದಾರರು ತಮಗೆ ಕೊಟ್ಟಿರುವ ಜವಾಬ್ದಾರಿಯನ್ನು ನಿರ್ವಹಿಸದೇ ಇದ್ದ ಕಾರಣ ಅವರು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವುದು ಕಂಡುಬರುತ್ತದೆ. 3ನೇ ಎದುರುದಾರರು ಈ ಬಗ್ಗೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. 1 ಮತ್ತು 2ನೇ ಎದರುದಾರರು ಕಾಮಗಾರಿಯ ಜವಾಬ್ದಾರಿ ಅಧಿಕಾರಿಯಾಗಿರುವುದರಿಂದ ಅವರು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

14. 1ನೇ ಎದುರುದಾರರಾದ ಶ್ರೀ. ಎಸ್.ಎ.ಸಾವಗಾಂವ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು 2ನೇ ಎದುರುದಾರರಾದ ಶ್ರೀ. ಎಂ.ಬಿ.ಇಮ್ಮಡಿ, ಸಹಾಯಕ

ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ತಮ್ಮ ಕರ್ತವ್ಯಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ.) ನಿಯಮ 1966ರ ನಿಯಮ 3(1)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

15. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/9/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು–1,
ಕರ್ನಾಟಕ ರಾಜ್ಯ, ಬೆಂಗಳೂರು.